# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 587

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 11.12.2020

| ಕ್ರಸಂ | ಕೋರಿರುವ ವಿವರ | ನೀಡುತ್ತಿರುವ ಮಾಹಿತಿ |
|---|---|---|
| ಅ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯರ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; (ವಿವರ ನೀಡುವುದು) | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯರ ಅಭಿವೃದ್ಧಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.<br>1. ಸಾಂತ್ವನ ಯೋಜನೆ<br>2. ಬಾಲಕಿಯರ ವಸತಿ ನಿಲಯ<br>3. ಸ್ವಾಧಾರ ಗೃಹ<br>4. 181 ಮಹಿಳಾ ಸಹಾಯವಾಣಿ<br>5. ಒನ್ ಸ್ಟಾಪ್ ಸೆಂಟರ್ (ಸಖಿ)<br>6. ಮಹಿಳಾ ವಿಶೇಷ ಚಿಕಿತ್ಸಾ ಘಟಕ<br>7. ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ<br>8. ಮಹಿಳೆಯರ ಬಗ್ಗೆ ಸಕಾರಾತ್ಮಕ ಮನೋಬಾವವನ್ನು ಹಮ್ಮಿಕೊಳ್ಳುವ ಲಿಂಗತ್ವದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆ<br>9. ಟ್ರಾನ್ಸಿಟ್ ಹಾಸ್ಟೆಲ್<br>10. ಸ್ತ್ರೀಶಕ್ತಿ ಯೋಜನೆ<br>11. ಪ್ರಧಾನಮಂತ್ರಿ ಮಾತೃವಂದನಾ ಯೋಜನೆ<br>12. ಮಾತೃಶ್ರೀ ಯೋಜನೆ<br>13. ಮಾತೃಪೂರ್ಣ ಯೋಜನೆ<br>14. ಉಜ್ವಲ ಯೋಜನೆ<br>15. ಸ್ವೀಕಾರ ಕೇಂದ್ರ ಮತ್ತು ರಾಜ್ಯ ಮಹಿಳಾ ನಿಲಯಗಳು<br>16. ಉದ್ಯೋಗಿನಿ ಯೋಜನೆ<br>17. ಕಿರುಸಾಲ ಯೋಜನೆ<br>18. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ<br>19. ಚೇತನ ಯೋಜನೆ<br>20. ಧನಶ್ರೀ ಯೋಜನೆ<br>21. ದೇವದಾಸಿ ಪುನರ್ವಸತಿ ಯೋಜನೆ<br>22. ಮಾಜಿ ದೇವದಾಸಿಯರಿಗೆ ಮಾಸಾಶನ<br>23. ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ<br>24. ಮಹಿಳಾ ತರಬೇತಿ ಯೋಜನೆ<br>25. ಕೆ.ಎಸ್.ಎಫ್.ಸಿ ಮುಖಾಂತರ ಬಡ್ಡಿ ಸಹಾಯಧನ ಯೋಜನೆ |

| | | |
|---|---|---|
| ಆ | ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಸ್ವಯಂ ಉದ್ಯೋಗ ನಡೆಸಲು ಸಾಲ/ಸಹಾಯಧನ ನೀಡಲು ಕಾರ್ಯಕ್ರಮ ಇದೆಯೇ; ಹಾಗೂ ಇದಕ್ಕಾಗಿ ವಾರ್ಷಿಕ ಎಷ್ಟು ಅನುದಾನ ನಿಗದಿಪಡಿಸಲಾಗಿದೆ. (ವಿವರ ನೀಡುವುದು) | ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಸ್ವಯಂ ಉದ್ಯೋಗ ನಡೆಸಲು ಉದ್ಯೋಗಿನಿ ಯೋಜನೆಯಡಿ ಬ್ಯಾಂಕುಗಳ ಮೂಲಕ ಸಾಲ ಹಾಗೂ ನಿಗಮದಿಂದ ಸಹಾಯಧನ ನೀಡಲಾಗುತ್ತಿದೆ.<br>ಸದರಿ ಯೋಜನೆಯಡಿ 2020-21ನೇ ಸಾಲಿಗೆ ರೂ. 2000.00 ಲಕ್ಷಗಳನ್ನು ನಿಗದಿ ಪಡಿಸಲಾಗಿದೆ. |
| ಇ | ಮಹಿಳಾ ಅಭಿವೃದ್ಧಿ ನಿಗಮದಿಂದ ಯಾವ ಯಾವ ಸೌಲಭ್ಯಗಳನ್ನು ಮಹಿಳೆಯರ ಕಲ್ಯಾಣಕ್ಕಾಗಿ ನೀಡಲಾಗುತ್ತದೆ? (ವಿವರ ನೀಡುವುದು) | ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಕಲ್ಯಾಣಕ್ಕಾಗಿ ನೀಡಲಾಗುತ್ತಿರುವ ಸೌಲಭ್ಯಗಳ ವಿವರವನ್ನು **ಅನುಬಂಧ-1** ರಲ್ಲಿ ಸಲ್ಲಿಸಿದೆ. |

ಸಂಖ್ಯೆ: ಮಮಇ/80/ಮಅನಿ/2020

**(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು,

## ಅನುಬಂಧ-1

1. **ಉದ್ಯೋಗಿನಿ ಯೋಜನೆ** :- ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನವನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಕನಿಷ್ಠ ರೂ.1.00 ಲಕ್ಷದಿಂದ ಗರಿಷ್ಠ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ರೂ.50 ರಷ್ಟು, ಗರಿಷ್ಠ ರೂ.1,50,000/-. ಕುಟುಂಬದ ವಾರ್ಷಿಕ ಆದಾಯದ ಗರಿಷ್ಠ ಮಿತಿ ರೂ.2.00 ಲಕ್ಷಗಳು.

   ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ರೂ.1.00 ಲಕ್ಷ ರೂ ಗಳಿಂದ ರೂ. 3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.30 ರಷ್ಟು ಗರಿಷ್ಠ ರೂ.90,000/-. ಕುಟುಂಬದ ವಾರ್ಷಿಕ ಆದಾಯದ ಗರಿಷ್ಠ ಮಿತಿ ರೂ.1.50 ಲಕ್ಷಗಳು. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು.

2. **ಕಿರುಸಾಲ ಯೋಜನೆ**:-ಈ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು ಆರ್ಥಿಕವಾಗಿ ಸಬಲರಾಗಲು ಪ್ರತಿ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಕ್ಕೆ ನಿಗಮದ ವತಿಯಿಂದ ಬಡ್ಡಿ ರಹಿತ ಸಾಲ ಒದಗಿಸುವುದು.

   ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ತ್ರೀ ಶಕ್ತಿ ಸಂಘಕ್ಕೆ ರೂ.1.00 ಲಕ್ಷದಿಂದ ರೂ. 3.00 ಲಕ್ಷಗಳವರೆಗೆ ಮತ್ತು ಇತರೆ ವರ್ಗದ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳಿಗೆ ರೂ.1.00 ಲಕ್ಷದಿಂದ ರೂ. 2.00 ಲಕ್ಷಗಳವರೆಗೆ ಬಡ್ಡಿ ರಹಿತ ಸಾಲ ಒದಗಿಸಲಾಗುತ್ತದೆ.

3. **ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ**:- ಲಿಂಗತ್ವ ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ರೂ.50,000/-(ರೂ.25,000/-ಸಾಲ, ರೂ.25,000/- ಪ್ರೋತ್ಸಾಹಧನ) ಗಳ ಆರ್ಥಿಕ ಸೌಲಭ್ಯವನ್ನು ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ನೀಡಲಾಗುತ್ತದೆ.

4. **ಚೇತನ ಯೋಜನೆ**:-ದಮನಿತ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ಎಲ್ಲಾ ವರ್ಗದ ದಮನಿತ ಮಹಿಳೆಯರಿಗೆ ನೇರವಾಗಿ ತಲಾ ರೂ.50,000/-(ರೂ.25,000/- ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನ)ಗಳನ್ನು ಉದ್ಯಮಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ನೀಡಲಾಗುತ್ತದೆ.

5. **ಧನಶ್ರೀ ಯೋಜನೆ**:- 18 ರಿಂದ 60 ವಯೋಮಾನದ ಹೆಚ್.ಐ.ವಿ. ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ರೂ.50,000/-(ರೂ.25,000/-ಸಾಲ, ರೂ.25,000/- ಪ್ರೋತ್ಸಾಹಧನ) ಗಳ ಆರ್ಥಿಕ ಸೌಲಭ್ಯವನ್ನು ಉದ್ಯಮಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ಒದಗಿಸಲಾಗುತ್ತಿದೆ.

6. **ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ** :-ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ. 50,000/-(ರೂ.25,000/-ಗಳ ಸಾಲ, ರೂ. 25,000ಗಳ ಪ್ರೋತ್ಸಾಹಧನ)ಗಳ ಆರ್ಥಿಕ ಸೌಲಭ್ಯವನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ. ಹಾಗೂ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು, ಕಾನೂನು ಶಿಬಿರ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗಾಗಿ ಆರೋಗ್ಯ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ.

7. **ಮಾಜಿ ದೇವದಾಸಿಯರಿಗೆ ಮಾಸಾಶನ**:- 45 ವರ್ಷ ಮೀರಿದ ಮಾಜಿ ದೇವದಾಸಿಯರಿಗೆ ಕನಿಷ್ಠ ಜೀವನ ನಡೆಸಲು ಸಹಕಾರಿಯಾಗುವಂತೆ, ರೂ. 1500/-ಗಳ ಮಾಸಾಶನವನ್ನು ನೀಡಲಾಗುತ್ತಿದೆ.

8. **ಮಹಿಳಾ ತರಬೇತಿ ಯೋಜನೆ**:-ಆರ್ಥಿಕವಾಗಿ ಹಿಂದುಳಿದ ಮಹಿಳೆಯರು, ದಮನಿತ ಮಹಿಳೆಯರು ಮತ್ತು ವಿಶೇಷ ವರ್ಗದವರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ, ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಗುರಿಯನ್ನು ಹೊಂದಲಾಗಿದೆ.

9. **ಬಡ್ಡಿ ಸಹಾಯಧನ ಯೋಜನೆ (ಕರ್ನಾಟಕ ರಾಜ್ಯ ಆರ್ಥಿಕ ಹಣಕಾಸು ನಿಗಮದ ಮೂಲಕ)** :-
ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಕನಿಷ್ಟ ರೂ.5.00 ಲಕ್ಷದಿಂದ ರೂ.200.00 ಲಕ್ಷಗಳ ಸಾಲವನ್ನು ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ. 10 ರಷ್ಟು ಬಡ್ಡಿ ಸಹಾಯಧನವನ್ನು ಸಣ್ಣ/ ಮದ್ಯಮ ಕೈಗಾರಿಕೆ ಹಾಗೂ ಸೇವಾ ಘಟಕಗಳನ್ನು ಪ್ರಾರಂಭಿಸಿ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗುವ ಮಹಿಳಾ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ ನೀಡಲಾಗುತ್ತಿದೆ.